ಯಲ್ಲಿ ಬಂದು ಎಲ್ಲಾ ವಿಚಾರಗಳಿಗೂ ಒಪ್ಪಿಗೆ ಕೊಟ್ಟಿದೆ. ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಕಳಕಳಿ ಸರ್ಕಾರಕ್ಕೆ ಇದೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇವೆ.

ತರೀಕೆರೆ ತಾಲ್ಲೂಕಿನಲ್ಲಿ ಡಿಪ್ಲೊಮೋ ಅಥವಾ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವುದು.

೧೫೧೧. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತರೀಕೆರೆ ತಾಲ್ಲೂಕಿನಲ್ಲಿ ಡಿಪ್ಲೋಮೊ ಅಥವಾ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರ ಯೋಚಿಸಿದ್ದಾರೆಯೇ.

ಆ) ಹಾಗಿದ್ದಲ್ಲಿ ಅದನ್ನು ಪ್ರಾರಂಭಿಸಲು ಸರ್ಕಾರದವರಿಗೆ ಆದ ಅನಾನುಕೂಲಗಳೇನು.

ಇ) ಸಾರ್ವಜನಿಕರು ಸಹಕಾರ ನೀಡುವಲ್ಲಿ ಮುಂದೆ ಬಂದಲ್ಲಿ ಅದನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಇಲ್ಲ.

ಆ) ಹಣಕಾಸು ಮತ್ತು ಇತರ ಸೌಲಭ್ಯಗಳ ಕೊರತೆ.

ಇ) ಸಧ್ಯಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೆ, ತರೀಕೆರೆ ತಾಲ್ಲೂಕು ಕೈಗಾರಿಕೆಯಲ್ಲಿ ಮತ್ತು ಎಲ್ಲಾ ವಿಧದಲ್ಲಿ ಹಿಂದುಳಿದ ಪ್ರದೇಶ. ಶೈಕ್ಷಣಿಕವಾಗಿಯೂ ಬಹಳ ಹಿಂದುಳಿದಿದೆ. ಆದುದರಿಂದ ತಾವು ಐಟಿಐ ಅಥವಾ ಡಿಪ್ಲೊಮೊ ಕೋರ್ಸುಗಳನ್ನು ತೆರೆಯುವುದರ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರೆ ಅಲ್ಲಿಯ ಜನರಿಗೆ ಅನುಕೂಲ ಮಾಡಿ ಕೊಟ್ಟ ಹಾಗೆ ಆಗುತ್ತದೆ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಸಭಾಧ್ಯಕ್ಷರೆ, ಐಟಿಐ ನನ್ನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅದು ಬರುವುದು ಕಾರ್ಮಿಕ ಇಲಾಖೆಯ ಕೆಳಗೆ. ಅವರು ಅದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳಬೇಕು. ನನ್ನ ಇಲಾಖೆ ವ್ಯಾಪ್ತಿಯಲ್ಲಿ ಬರುವ ಪಾಲಿಟೆಕ್ನಿಕ್ ವಿಷಯದಲ್ಲಿ ಹೇಳುವುದಾದರೆ ಈಗಿರುವ ಹಣಕಾಸಿನ ಪರಿಸ್ಥಿತಿಯಲ್ಲಿ ಸರ್ಕಾರಿ ವಲಯದಲ್ಲಿ ಯಾವುದೇ ಶಾಲೆ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದೇನೆ.

ಅಧ್ಯಕ್ಷರು,—ಪ್ರಶ್ನೋತ್ತರ ವೇಳೆ ಮುಂಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ ಪಟ್ಟಿ

ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರ ಕಾರ್ಯವ್ಯಾಪ್ತಿ

೩೪೨. ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು),—ಮಾನ್ಯ ವಿದ್ಯಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕಾಲೇಜು ವಿದ್ಯಾಭ್ಯಾಸ ಇಲಾಖೆ ನಿರ್ದೇಶಕ ಇವರ ಕಾರ್ಯವ್ಯಾಪ್ತಿ ಏನು, ನಿರ್ವಹಿಸುವ ಕಾರ್ಯವೇನು.

ಆ) ಈ ವರ್ಷ ಇವರು ಎಷ್ಟು ಕಾಲೇಜುಗಳ ತನಿಖೆ ನಡೆಸಿದ್ದಾರೆ ಹಾಗೂ ಅವು ಯಾವುವು?

ಶ್ರೀ ಎಂ ರಘುಪತಿ (ಮಾನ್ಯ ವಿದ್ಯಾ ಸಚಿವರು).—

ಅ) ಅನುಬಂಧ–ಎ ನಲ್ಲಿ ತೋರಿಸಿರುವಂತೆ ಕಾಲೇಜು ಶಿಕ್ಷಣ ನಿರ್ದೇಶಕ ಅವರ ಕಾರ್ಯ ವ್ಯಾಪ್ತಿ ಮತ್ತು ಕಾರ್ಯ ನಿರ್ವಹಣೆ ಇದೆ.

ಆ) ಅನುಬಂಧ–ಬಿನಲ್ಲಿ ತೋರಿಸಿರುವ ಕಾಲೇಜುಗಳಿಗೆ ಪ್ರಾದೇಶಿಕ ಕಛೇರಿಗಳಿಗೆ ಭೇಟಿ ನೀಡಿದ್ದಾರೆ.

ಅನುಬಂಧ–ಎ

ರಾಜ್ಯದಲ್ಲಿ ೩ ವರ್ಷಗಳ ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿಬಿಎಂ ಡಿಗ್ರಿ ಕೋರ್ಸಸ್ ನಡೆಸುವ ಕಾಲೇಜು ಶಿಕ್ಷಣ ನಿರ್ದೇಶಕಿಯವರ ಕಾರ್ಯವ್ಯಾಪ್ತಿಯಲ್ಲಿ ಬರುತ್ತವೆ. ಸಧ್ಯಕ್ಕೆ ೨೦೩ ಖಾಸಗೀ ಕಾಲೇಜುಗಳೂ ೭೬ ಸರ್ಕಾರಿ ಕಾಲೇಜುಗಳು, ಕಾಲೇಜು ಶಿಕ್ಷಣ ಇಲಾಖೆಯ ಅಧೀನದಲ್ಲಿವೆ.

ಕಾಲೇಜು ಶಿಕ್ಷಣ ನಿರ್ದೇಶಕರ ಕಾರ್ಯಸ್ವರೂಪ ಕೆಳಕಂಡಂತಿವೆ :—

1. ಆಡಳಿತಾತ್ಮಕ :

೧. ಇಲಾಖೆಯ ಕಾರ್ಯನೀತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಮತ್ತು ಅಧೀನ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

೨. ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ನೇಮಕಾತಿ ಮತ್ತು ಬಡ್ತಿ ವಿಷಯಗಳಲ್ಲಿ ಸರ್ಕಾರದ ಆದೇಶದ ಪ್ರಕಾರ ಮೀಸಲಾತಿಯನ್ನು ಅನುಸರಿಸುವುದನ್ನು ಖಾತರಿಪಡಿಸಿ ಕೊಳ್ಳುವುದು.

೩. ಅವಧಿ ಪೂರ್ಣ ವರ್ಗಾವಣೆ ಹಾಗೂ ಸ್ಥಳನಿಯುಕ್ತಿ (ಡೆಪುಟೇಷನ್)ಗಳ ಬಗ್ಗೆ ಆದೇಶ ನೀಡುವುದು.

೪. ಎಕ್ಸ್ ಅಫಿಷಿಯೋ ಸದಸ್ಯರಾಗಿ ರಾಜ್ಯದ ಎಲ್ಲಾ ೫ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್ ಸೆನೆಟ್ ಮತ್ತು ಅಕೆಡೆಮಿಕ್ ಕೌನ್ಸಿಲ್‌ಗಳ ಸಭೆಗೆ ಮತ್ತು ಪದವಿಪೂರ್ವ ಶಿಕ್ಷಣ ಮಂಡಳಿಯ ಸಭೆಗಳಲ್ಲಿ ಹಾಗೂ ಇತರ ಮುಖ್ಯವಾದ ಸಭೆಗಳಲ್ಲಿ ಭಾಗವಹಿಸುವುದು.

೫. ಪ್ರಾದೇಶಿಕ ಕಚೇರಿಗಳು ಮತ್ತು ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಿಗೆ ಅನಿರೀಕ್ಷಿತ ಭೇಟಿ ನೀಡಿ ತನಿಖೆ ನಡೆಸುವುದು ಮತ್ತು ಆಡಳಿತದ ಬಗ್ಗೆ ಸೂಕ್ತ ಸೂಚನೆಗಳನ್ನು ನೀಡುವುದು.

೬. ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹಾಗೂ ಕಾರ್ಯ ಭಾರಕ್ಕನುಗುಣವಾಗಿ ೩ ತಿಂಗಳಿಗೆ ಮೊದಲಂತೆ ಹೆಚ್ಚಿನ ಅಧ್ಯಾಪಕರುಗಳನ್ನು ನೇಮಿಸಿ ಕೊಳ್ಳುವುದು.

೭. ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಗಳಿಗಾಗಿ ಸರ್ಕಾರಿ ವೈದ್ಯರು ಗಳನ್ನು ನೇಮಿಸುವುದು.

೮. ಬೋಧಕೇತರ ನೌಕರರನ್ನು (ನಾನ್‌ಗೆಜೆಟೆಡ್) ಬೇರೆ ಇಲಾಖೆಗಳಿಗೆ ೫ ವರ್ಷಗಳಿಗೆ ಮೊದಲಂತೆ ಸ್ಥಳ ನಿಯುಕ್ತಿ ಮಾಡುವುದು.

೯. ಕೆಳಗಿನ ಅಧಿಕಾರಿಕಳಿಗೆ ವಿಶ್ವ ವಿದ್ಯಾನಿಲಯಗಳ ಪರೀಕ್ಷಾ ಕಾರ್ಯಭಾರವನ್ನು ನಿರ್ವಹಿಸಲು ಅನುಮತಿ ನೀಡುವುದು.

2 ಆರ್ಥಿಕ ಅಧಿಕಾರ :

೧. ಕಾಲೇಜುಗಳ ಪ್ರಯೋಗ ಶಾಲೆಗಳಲ್ಲಿ ಉಪಯೋಗಿಸುವ ವಸ್ತುಗಳ ಹಾಗೂ ಉಪಕರಣ ಗಳನ್ನು (ಖರೀದಿಸಲು) ಕೊಳ್ಳಲು ಅನುಮತಿ ನೀಡುವುದು.

೨. ಪ್ರಯೋಗ ಶಾಲೆಗಳಲ್ಲಿ ಉಪಯೋಗಿಸಲು ಪ್ರಾಣಿಗಳ ಹಾಗೂ ಸಸ್ಯಗಳ ನಮೂನೆಗಳನ್ನು ವಾರ್ಷಿಕವಾಗಿ ಪೆಡ್ಯೂಲ್ಡ್ ರೇಟಿಗೆ ಮೀರದಂತೆ ಮೂರು ವರ್ಷಗಳವರೆಗೆ ಕೊಳ್ಳಲು ಮಂಜೂರಾತಿ ನೀಡುವುದು.

೩. ಸರ್ಕಾರವು ಮಂಜೂರು ಮಾಡಿದ ಶ್ರೇಣಿಗನುಗುಣವಾಗಿ ಸ್ಕಾಲರ್ ಶಿಪ್, ಫ್ರೀ ಸ್ಟೂಡೆಂಟ್ ಷಿಪ್ ಮತ್ತು ಫ್ರೀ ಷಿಪ್‌ಗಳನ್ನು ಮಂಜೂರು ಮಾಡುವುದು.

೪. ಹೆಚ್ಚುವರಿ ವೆಚ್ಚ ತಗಲದ ಸರ್ಕಾರಿ ಹಾಸ್ಟೆಲ್‌ಗಳ ವೆಚ್ಚದ ಶ್ರೇಣಿಗಳನ್ನು ಹೊಂದಿಸಲು ಅಧಿಕಾರ ನಿಡುವುದು.

೫. ಕಾಲೇಜುಗಳ ಹಾಗೂ ಇಲಾಖೆಯ ಗ್ರಂಥಾಲಯಗಳಿಗೆ ಜರ್ನಲ್ಸ್, ಮ್ಯಾಗಜೈನ್ಸ್ ಮತ್ತು ಪಿರಿಯಾಡಿಕಲ್ಸ್‌ಗಳನ್ನು ಒದಗಿಸಲು ಪಂತಿಗೆಗಳನ್ನು ನೀಡುವುದು ವ ತ್ಸ ೫೦೦ರೂ.ಗಳ ವರೆಗೆ ಮುಂಗಡ ನೀಡುವುದು.

೬. ಬೋಧನ ಉಲಕರಣಗಳು ಮತ್ತು ಬಿಲ್ಡಿಂಗ್ ಗ್ರಾಂಟ್ಸ್‌ಗಳನ್ನು ಸಂಯೋಜಿಸಲ್ಪಟ್ಟ ಕಾಲೇಜುಗಳಿಗೆ (ಅಫಿಲಿಯೇಟೆಡ್) ಅನುದಾನ ಸಂಹಿತೆ (ಗ್ರಾಂಟ್ ಇನ್ ಎಡ್) ಪ್ರಕಾರ ಮಂಜೂರು ಮಾಡುವುದು

೭. ತಾಂತ್ರಿಕ ಕೋರ್ಸ್‌ಗಳ ಆಂಗವಾಗಿ ವಿದ್ಯಾರ್ಥಿಗಳಿಗೆ ಎಕ್ಸ್‌ಕರಷನ್ ಪ್ರೋಗ್ರಾಮ್ಸಗಳನ್ನು ನಿಗದಿ ಪಾಡಿದ್ದರೆ ಅಂತಹ ಪ್ರೋಗ್ರಾಮ್‌ಗಳಿಗೆ ಮಂಜೂರಾತಿ ನೀಡುವುದು.

ಮೇಲ್ಕಂಡ ಅಧಿಕಾರಗಳ ಜೊತೆಗೆ ಕೆಳಗಿನ ಇತರ ಅಧಿಕಾರಗಳೂ ಇವೆ

೧. ಕಾಲೇಜುಗಳ ನಿವೇಶನ, ಆಟದ ಮೈದಾನ ಹಾಗೂ ಬಿಲ್ಡಿಂಗ್‌ಗಳ ದಾನಗಳನ್ನು ಸ್ವೀಕರಿಸುವುದು.

೨. ಟೆಂಡರ್‌ಗಳನ್ನು ಕರೆದ ನಂತರ ಬಿಲ್ಡಿಂಗ್‌ಗಳನ್ನು, ಹಾಸ್ಟೆಲ್, ಫಲಹಾರ ಮಂದಿರ ಮುಂತಾದವುಗಳನ್ನು ನಡೆಸಲು ಬಾಡಿಗೆಗೆ ಕೊಡುವುದು.

೩. ಟೆಂಡರ್‌ಗಳನ್ನು ಕರೆದ ನಂತರ ಕಾಲೇಜುಗಳ ಸೈಕಲ್ ಸ್ಟ್ಯಾಂಡ್‌ಗಳನ್ನು ಬಾಡಿಗೆಗೆ ಕೊಡುವುದು.

೪. ಕ್ಲಾಸ್ ಪರೀಕ್ಷೆ ಮತ್ತು ಅಂತಿಮ ಪರೀಕ್ಷೆಗಳು ನಡೆಯುವ ವೇಳೆಯಲ್ಲಿ ಪ್ರತಿನಿತ್ಯ ಕುಡಿಯುವ ನೀರು ಸರಬರಾಜು ಮಾಡುವುದನ್ನು (ರೂಪಾಯಿ ೧ ರಿಂದ ೨ ರವರೆಗೆ) ನೇಮಿಸಲು ಮಂಜೂರು ಮಾಡುವುದು.

೫. ತಪ್ಪಿ ಹೋದ ಪೋಚರ್ಸ್‌ಗಳಿಗೆ ಬದಲಾಗಿ ಸರ್ಟಿಫಿಕೇಟ್‌ಗಳನ್ನು ಅಂಗೀಕರಿಸುವುದು ಇತ್ಯಾದಿ.

ಅನುಬಂಧ–ಬಿ

೧೯೮೫ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರು ಈ ಕೆಳಕಂಡ ಪ್ರಾದೇಶಿಕ ಕಚೇರಿಗಳಿಗೆ/ಕಾಲೇಜುಗಳಿಗೆ ಭೇಟಿ ನೀಡಿದ, ಸಭೆಗೆ ಹಾಜರಾದ ವಿವರಗಳ ಪಟ್ಟಿ

ಕ್ರಮ ಸಂಖ್ಯೆ	ದಿನಾಂಕ	ಸಭೆಗೆ ಹಾಜರಾದ, ಭೇಟಿ ನೀಡಿದ ಕಾಲೇಜುಗಳು ಪ್ರಾದೇಶಿಕ ಕಚೇರಿಗಳ ವಿವರ
೧	೨	೩
೧	೯–೧–೮೫	ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು
೨	೩೦–೧–೮೫	ಅ) ಲಿಂಗರಾಜ್ ಕಾಲೇಜು, ಬೆಳಗಾವಿ ಆ) ಆರ್. ಎಲ್. ಸೈನ್ಸ್ ಇನ್‌ಸ್ಟಿಟ್ಯೂಟ್, ಬೆಳಗಾಂ ಇ) ಆರ್. ಪಿ. ಡಿ. ಕಾಲೇಜು, ಬೆಳಗಾಂ
೩	೨–೨ ೮೫	ಶ್ರೀ ಭುವನೇಂದ್ರ ಕಾಲೇಜು. ಕಾರ್ಕಳ
೪	೭–೨–೮೫	ಅ) ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ಆ) ಮಹಾರಾಣಿ ವಿಜ್ಞಾನ ಕಾಲೇಜು, ಮೈಸೂರು ಇ) ಮಹಾರಾಣಿ ಕಲಾ ಕಾಲೇಜು, ಮೈಸೂರು

೧	೨	೩
೫	೧೨-೨-೮೫	ಅ) ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ಆ) ಕಿಟ್ಟಲ್ ಕಾಲೇಜು, ಧಾರವಾಡ ಇ) ಪಿ. ಸಿ. ಜಾಬಿನ್ ಕಾಲೇಜು, ಧಾರವಾಡ
೬	೫-೨-೮೫	ಅ) ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಕಾಲೇಜು, ಧಾರವಾಡ
೭	೨೮-೨-೮೫	ಅ) ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ ಮೈಸೂರು ಆ) ಸರ್ಕಾರಿ ಕಾಲೇಜು ಮಾದಕೇರಿ
೮	೧೧-೩-೮೫	ಅ) ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ಆ) ಮಹಾರಾಣಿ ಕಲಾ ಕಾಲೇಜು, ಮೈಸೂರು ಇ) ಮಹಾರಾಣಿ ವಿಜ್ಞಾನ ಕಾಲೇಜು, ಮೈಸೂರು ಈ) ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ ಸರ್ಕಾರಿ ಬಾಲಕರ ಕಾಲೇಜು, ಮಂಡ್ಯ
೯	೧೭-೪-೮೫	ಪ್ರಾದೇಶಿಕ ಕಚೇರಿ, ಮೈಸೂರು
೧೦	೪-೫-೮೫	ಪ್ರಾದೇಶಿಕ ಕಚೇರಿ, ಮೈಸೂರು
೧೧	೨೫-೫-೮೫	ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್.
೧೨	೧೪-೭-೮೫	ಎಲ್ಲಾ ಖಾಸಗಿ ಕಾಲೇಜುಗಳ ಪ್ರಾಂಶುಪಾಲರ ಸಭೆ, ರಾಯಚೂರು
೧೩	೩-೮-೮೫	ಪ್ರಾದೇಶಿಕ ಕಚೇರಿ, ಮೈಸೂರು
೧೪	೧೩-೮-೮೫	ಪ್ರಾದೇಶಿಕ ಕಚೇರಿ, ಮೈಸೂರು
೧೫	೨೬-೮-೮೫	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ
೧೬	೩೧-೮-೮೫	ಅ) ಪ್ರಾದೇಶಿಕ ಕಚೇರಿ, ಮಂಗಳೂರು ಆ) ಸರ್ಕಾರಿ ಕಾಲೇಜು, ಮಂಗಳೂರು ಇ) ಸೆಂಟ್ ಆಲಿಯಸ್ ಕಾಲೇಜು, ಮಂಗಳೂರು ಈ) ಸೆಂಟ್ ಆಗ್ನೇಸ್ ಕಾಲೇಜು, ಮಂಗಳೂರು
೧೭	೧೦-೯-೮೫	ಅ) ಧಾರವಾಡದಲ್ಲಿ ಜರುಗಿದ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಚೇರಿಗಳ ಉಪ ನಿರ್ದೇಶಕರ ಸಭೆ ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೊರಬ
೧೮	೨೮-೧೦-೮೫	ಅ) ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಗುಲ್ಬರ್ಗ ಆ) ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಯ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಸಭೆ
೧೯	೩-೧೧-೮೫	ಅ) ಸರ್ಕಾರಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ಚಿತ್ರದುರ್ಗ ಆ) ಸರ್ಕಾರಿ ಪ್ರಥಮ ದರ್ಜೆ ಕಲಾ ಕಾಲೇಜು, ಚಿತ್ರದುರ್ಗ ಇ) ಶ್ರೀ ಜಗದ್ಗುರು ಮುರುಘರಾಜೇಂದ್ರ ಕಾಲೇಜು, ಚಿತ್ರದುರ್ಗ ಈ) ಎಸ್. ಜೆ. ಎಂ. ಕಾಲೇಜು, ಚಿತ್ರದುರ್ಗ
೨೦	೨-೧೨-೮೫	ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು
೨೧	೬-೧೨-೮೫	ಬಿ. ಇ. ಎ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ ಎ. ವಿ. ಕೆ. ಮಹಿಳಾ ಕಾಲೇಜು, ದಾವಣಗೆರೆ